



ಇಂಥ ಸಂಕೀರ್ಣ ವಾತಾವರಣದಲ್ಲಿ ಹೈದರಾಬಾದ್‌ನಲ್ಲಿ ದಿನಗಳನ್ನು ಕಳೆಯುತ್ತಿದ್ದ ಹರಿಲಾಲನಿಗೆ ಬಾಪೂ ಅವರ ಪತ್ರ ಸಿಕ್ಕಿತು, ಆಗ ಅವನ ಹತಾಶಾಭಾವನೆ ಮಿತಿ ಮೀರಿತ್ತು. ಮನೆಯನ್ನು ಮಾಡಿ ನೆಮ್ಮದಿಯಿಂದ ಬದುಕುವ ತನ್ನಿಚ್ಛೆ ಎಂದೂ ಪೂರ್ಣವಾಗದು ಎಂದು ಅವನಿಗೆ ವಿಶ್ವಾಸ ಮೂಡಿತು. ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುವ ಅವನಿಚ್ಛೆ ಸಹ ಪೂರ್ಣ ವಾಗಿರಲಿಲ್ಲ. ಅವನು ಬ್ಯಾರಿಸ್ಟರ್ ಆಗುವ ಇಚ್ಛೆಯನ್ನು ಪೂರೈಸದಾದ, ಈಗ ಮನೆ ಮಾಡಿ ವಾಸಿಸುವ ಸಾಮಾನ್ಯ ಇಚ್ಛೆ ಸಹ ಪೂರ್ಣಗೊಳ್ಳುವ ಲಕ್ಷಣ ಕಾಣ ಬರುತ್ತಿರಲಿಲ್ಲ. ಇಂಥ ನಿರಾಸೆಯ ಸ್ಥಿತಿಯಲ್ಲಿ ಅವನ ರೋಷ ಮತ್ತೊಮ್ಮೆ ಹೆಡೆಯಾಡಿತು. ಈಗ ಅವನಿಗೆ ಹೆಂಡತಿ ಮತ್ತು ಹಣ ಎರಡರ ಅಗತ್ಯವಿತ್ತು. ಈ ಎರಡೂ ಅಗತ್ಯಗಳನ್ನು ಈಡೇರಿಸಿಕೊಳ್ಳುವಂಥ ಹಿನ್ನೆಲೆ ಸಹ ಇತ್ತು. ಆದರೂ ಈ ಹಿನ್ನೆಲೆ ಅವನಿಗೆ ಭಾರವಾಗಿ ಅವನನ್ನೇ ತುಳಿಯುತ್ತಿತ್ತು. ಈ ದುಃಖ ಅವನನ್ನು ಘೇರಾಯಿಸಿತು.

ಹರಿಲಾಲ ಇನ್ನು ಹೆಚ್ಚು ದಿನಗಳು ಹೈದರಾಬಾದ್‌ನಲ್ಲಿರಲು ಸಾಧ್ಯವಿರಲಿಲ್ಲ. ತುಲಸೀರಾಮರು ಸ್ಪಷ್ಟ ಶಬ್ದಗಳಲ್ಲಿ ಅವನಿಗೆ ಹೊರ ರಸ್ತೆಯನ್ನು ತೋರಿಸಿರಲಿಲ್ಲ, ಆದರೆ ತುಲಸೀರಾಮರ ಸಿಡುಕಿನ ವರ್ತನೆಯನ್ನು ಗಮನಿಸಿದಾಗ, ತಾನು ಹೊರಹೋಗುವ ಆ ಕ್ಷಣ ಬಂದಿದೆ ಎಂದು ಹರಿಲಾಲನಿಗೆ ಅನ್ನಿಸುತ್ತಿತ್ತು. ಇಷ್ಟು ದಿನಗಳು ಅವನು ಯಾವ ಪರಿಸ್ಥಿತಿಗಳಲ್ಲಿ ದಿನಗಳನ್ನು ಕಳೆದಿದ್ದನೋ, ಇನ್ನು ಆ ಪರಿಸ್ಥಿತಿಗಳಲ್ಲಿ ಹೆಚ್ಚು ದಿನ ತನ್ನಿಂದ ಕಳೆಯಲು ಸಾಧ್ಯವಿರಲಿಲ್ಲ. ಅದೊಂದು ದಿನ ಹರಿಲಾಲ ತನ್ನ ಈ ಅಲೆಮಾರಿ ಜೀವನಕ್ಕೆ ಇತಿಶ್ರೀ ಹಾಡಿದ. ಈಗ ಅವನಿಗೆ ಬಾಪೂ ಅವರಿಂದ ಯಾವುದೂ ಲಭ್ಯವಾಗುವುದು ಸಂಭವವಿರಲಿಲ್ಲ, ಪ್ರತಿಯಾಗಿ ಅವನು ಬಾಪೂ ಎದುರು ಸಹಾಯದ ಹಸ್ತವನ್ನು ಚಾಚಿದಾಗ, ಬಾಪೂ ಅವರು ಅದಕ್ಕೆ ವಿಪರೀತವಾಗಿ ತಮ್ಮ ಅಭಿಪ್ರಾಯವನ್ನು ಹೇಳಿದರು. ಈ ಪರಿಸ್ಥಿತಿಗಳನ್ನು ಗಮನಿಸಿದಾಗ ಹರಿಲಾಲನಿಗೆ, ಬಾಪೂ ಅವರು ತನ್ನನ್ನು ಸಂಪೂರ್ಣವಾಗಿ ತ್ಯಜಿಸಿದ್ದಾರೆ ಎಂದು ಅನ್ನಿಸಿತು.

ಒಂದು ವೇಳೆ ತಾನು ಬಾಪೂ ಅವರಿಂದ ತ್ಯಜಿಸಲ್ಪಟ್ಟಿದ್ದರೆ, ಪರಿವಾರ ತನಗೆ ಧಿಕ್ಕಾರ ಹಾಕಿದ್ದರೆ, ತಾನು ಸಮಾಜದಿಂದ ತಿರಸ್ಕೃತನಾಗಿದ್ದರೆ, ತಾನೇಕ ಈ ಪರಿವಾರ ಅಥವಾ ಈ ಸಮಾಜಕ್ಕೆ ಅಂಟಿಕೊಂಡಿರಬೇಕು? ಎಲ್ಲವನ್ನೂ ಭೋಗಿಸಿ ಒಂದು ಒಳ್ಳೆಯ ಬೆಲೆಯನ್ನೇಕೆ ವಸೂಲು ಮಾಡಬಾರದು? ಏನು ಮಾಡುವುದು, ಎಲ್ಲಿಗೆ ಹೋಗುವುದು ಎಂಬುದಂತೂ ಅನಿಶ್ಚಿತವಾಗಿತ್ತು, ಆದರೂ ಅವನು ಈ ಅನಿಶ್ಚಿತತೆಯ ಸ್ಥಿತಿಯಲ್ಲಿ ಹೈದರಾಬಾದನ್ನು ತ್ಯಜಿಸಿ ನಾಗಪುರಕ್ಕೆ ಬಂದ. ನಾಗಪುರದ 'ಡೈಲಿ ನೂಸ್' ಎಂಬ ಸ್ಥಳೀಯ ದೈನಿಕ ಪತ್ರಿಕೆಯ ಮಾಲೀಕನಿಗೆ ಹರಿಲಾಲನ ಪರಿಚಯವಿತ್ತು. ಬಾಪೂ ಅವರ ಪತ್ರದಿಂದ ಅವನ ಮನಸ್ಸಿನ ರೋಷ ಮತ್ತು ವೈಮನಸ್ಸು ಹೆಚ್ಚಿತ್ತು; ಅದನ್ನು ಶಮನಗೊಳಿಸದೆ ನೆಮ್ಮದಿ ಇರಲಿಲ್ಲ. 'ಡೈಲಿ ನ್ಯೂಸ್' ಪುಟಗಳಲ್ಲಿ ಬಾಪೂ ಅವರ ಬಗ್ಗೆ ಸಾರ್ವಜನಿಕವಾಗಿ ನಿವೇದನೆಯನ್ನು ಮಾಡಬೇಕು, ದೇಶದ ಕೊಳಕಾದ ಸಾಂಪ್ರದಾಯಿಕ ವಾತಾವರಣದಲ್ಲಿ ಬಾಪೂ ಅವರ ಶತ್ರುವೊಬ್ಬ ಅದರ ಲಾಭವನ್ನು ಪಡೆಯಲು ಬಯಸಿದರೆ, ಪಡೆಯಲಿ ಈ ವಿಷಯದ ಬಗ್ಗೆ ಹರಿಲಾಲನ ಮನಸ್ಸಿನಲ್ಲಿ ಕೋಲಾಹಲ ಎದ್ದಿತ್ತು. ಸ್ವರ್ಗದಿಂದ ಶಿವನ ಜಟೆಯಿಂದ ಇಳಿದ ಗಂಗೆ ಹೂಗಲಿಯ ದಡದಲ್ಲಿ ಹರಿಯುವ ಗಟಾರದವರೆಗೆ ವ್ಯಾಪಿಸಿತ್ತು. ಹಿಮಾಲಯದಿಂದ ಈ ಪ್ರವಾಹವನ್ನು ಕೈಸಾಲೆಗೆ ತಳ್ಳಿದಂತಾಗಿತ್ತು. ಹರಿಲಾಲ ನಾಗಪುರಕ್ಕೆ ಹೋಗುತ್ತಲೇ 'ಡೈಲಿ ನೂಸ್' ಪತ್ರಿಕೆಯ ಕಚೇರಿಯಲ್ಲಿ ಪ್ರಕಾಶಕರನ್ನು ಸಂಪರ್ಕಿಸಿದ; ನಂತರ ತನ್ನ ಅಭಿಪ್ರಾಯವನ್ನು ವಿಸ್ತಾರವಾಗಿ ಪ್ರಕಟಿಸಿದ. ಆ ಸಾರ್ವಜನಿಕ ನಿವೇದನೆಯಲ್ಲಿ ಹರಿಲಾಲ ಹೀಗೆ ಬರೆದ

'ನನ್ನ ತಂದೆ ನನ್ನನ್ನು ಸಂಪೂರ್ಣವಾಗಿ ತ್ಯಜಿಸಿ, ನನಗೆ ಬಹಿಷ್ಕಾರ ಹಾಕಲು ಬಯಸಿದ್ದಾರೆ. ನಾನೂ ಸಹ ಅವರೊಂದಿಗೆ ನನಗಿರುವ ಸಂಬಂಧವನ್ನು ಅಳಿಸಿಹಾಕದೆ ಬೇರೆ ಮಾರ್ಗವಿಲ್ಲ. ಕಳೆದ ಕೆಲವು ವರ್ಷಗಳಿಂದ ನನ್ನ ತಂದೆಯವರು ನನ್ನನ್ನು ಅಸಮರ್ಥನನ್ನಾಗಿ ಮಾಡುವುದಕ್ಕೆ ಪ್ರಯತ್ನಿಸಿದ್ದಾರೆ. ಕಳೆದ ಹದಿನೈದು ವರ್ಷಗಳಿಂದ ನನ್ನ ಮತ್ತು ಅವರ ಮಧ್ಯೆ ಭಿನ್ನಾಭಿಪ್ರಾಯ ನಡೆಯುತ್ತಿದೆ. ನಾನು ಹೋದಲ್ಲೆಲ್ಲಾ, ಕಾಂಗ್ರೆಸ್‌ನ ನೂರಾರು ಪ್ರಶಂಸಕರೆದುರು ನನ್ನ ದೂರನ್ನು ಹೇಳುತ್ತೇನೆ, ನನ್ನ ಕಷ್ಟವನ್ನು ಹೇಳಿಕೊಳ್ಳುತ್ತೇನೆ, ಅವರೆದುರು ರೋದಿಸುತ್ತೇನೆ, ಆದರೆ ಯಾರೂ ನನ್ನ ಬಗ್ಗೆ ಸಹಾನುಭೂತಿಯ ಮಾತುಗಳನ್ನು ಹೇಳುವುದಿಲ್ಲ. ಹಿಂದೂ ಜಾತಿ ನನ್ನನ್ನು ಹೊರ ಹಾಕಲು ಬಯಸದವರೆಗೆ, ನಾನಾದರೂ ಅದನ್ನು ಎಲ್ಲಿ ತ್ಯಜಿಸಲು ಬಯಸುತ್ತೇನೆ? ಹೀಗಾಗಿ ಧರ್ಮ ಪರಿವರ್ತನೆಯ ಬಗ್ಗೆ ನಾನು ಯಾವುದೇ ತೀರ್ಮಾನವನ್ನು ಕೈಗೊಂಡಿಲ್ಲ.'

ಪ್ರತ್ಯಕ್ಷವಾಗಿ ಬಾಪೂ ಅವರನ್ನು ವಿರೋಧಿಸುವ ವ್ಯಕ್ತಿಗಳಿಗೆ ಮತ್ತು ಸಾಂಪ್ರದಾಯಿಕ ತತ್ವಗಳು ಖುದ್ದು ಅವನ ಬಳಿಗೆ ಬಂದು, ಲಾಭವನ್ನು ಕೊಡುವುದಕ್ಕೆ ಈ ಪತ್ರ ಸಾರ್ವಜನಿಕ ಆಹ್ವಾನದಂತಿತ್ತು. ಹರಿಲಾಲ ಈಗ ಕೆಳ ಮಟ್ಟದ ವಿಚಾರಗಳಲ್ಲಿ ಸಿಲುಕಿದ್ದ; ಬಾಪೂ ಅವರ ಮೇಲೆ ತನಗಿದ್ದ ರೋಷವನ್ನು ತಗ್ಗಿಸಿಕೊಳ್ಳಲು, ಬೇರೆ ಸಾಂಪ್ರದಾಯಿಕ ತತ್ವಗಳು ತನ್ನನ್ನು ಒಪ್ಪಿಕೊಂಡರೆ ತಾನು ಬಾಪೂ ಅವರೊಂದಿಗೆ ಸೇಡನ್ನು ತೀರಿಸಿಕೊಳ್ಳಬಹುದು ಎಂಬುದು ಅವನ ಯೋಚನೆಯಾಗಿತ್ತು.

'ಡೈಲಿ ನ್ಯೂಸ್‌ನಲ್ಲಿ ಇದು ಪ್ರಕಟಗೊಂಡ ನಂತರ ಜನಾಬ್ ಜಕಾರಿಯಾ ಅವರ ದೃಷ್ಟಿ ಹರಿಲಾಲನ ನಿವೇದನೆಯ ಮೇಲೆ ಬಿತ್ತು; ಅವರಿಗೆ ಈ ವಿಷಯದಲ್ಲಿ ಬಹಳಷ್ಟು ಸಾಧ್ಯತೆಗಳು ಕಂಡುಬಂದವು. ಅವರ ಕಣ್ಣುಗಳು ಹೊಳೆದವು. ಜನಾಬ್ ಜಕಾರಿಯಾ ದೇಶದ ಕಟ್ಟಾ ಮುಸ್ಲಿಮ್ ಧರ್ಮಗಳ ಸಮರ್ಥಕರಲ್ಲಿ ಒಬ್ಬರಾಗಿದ್ದರು. ರಾಷ್ಟ್ರವಾದದ ಒಲವಿರುವ ಮುಸ್ಲಿಮರನ್ನು ಅವರು ತಮ್ಮ ಶತ್ರುಗಳೆಂದು ತಿಳಿಯುತ್ತಿದ್ದರು. ಪಾಕಿಸ್ತಾನದ ಸೃಷ್ಟಿಯಾದರೆ, ಪಾಕಿಸ್ತಾನಕ್ಕೆ ಸೇರಲು ಸಾಧ್ಯವಾಗದ ಪ್ರದೇಶಗಳಲ್ಲಿ ವಾಸಿಸುವ ಮುಸಲ್ಮಾನರಿಗೂ ಸಹ, ಪಾಕಿಸ್ತಾನದಲ್ಲಿ ಇಸ್ಲಾಮಿನ ಕಹಳೆ ಊದಲಾಗುವುದು ಎಂಬ ಸುಂದರ ಕನಸುಗಳನ್ನು ಅವರು ತೋರಿಸುತ್ತಿದ್ದರು, ಇದರಲ್ಲಿ ಅವರು ಯಶಸ್ಸನ್ನು ಸಹ ಪಡೆದಿದ್ದರು. ಈ ಯಶಸ್ಸಿನ ಬಾಸಿಂಗವನ್ನು ತಮ್ಮ ತಲೆಗೆ ಕಟ್ಟಿಕೊಳ್ಳುವ ಸಮಯ ಈಗ ಒದಗಿ ಬಂದಿದೆ ಎಂದು ಅವರಿಗೆ ಅನ್ನಿಸಿತು.

ಹರಿಲಾಲನ ಬಗ್ಗೆ ಜನಾಬ್ ಜಕಾರಿಯಾ ಅನೇಕ ವಿಷಯಗಳನ್ನು ತಿಳಿದಿದ್ದರು. ಅವರು 'ಡೈಲಿ ನೂಸ್'ನಲ್ಲಿ ಪ್ರಕಟಗೊಂಡ ಹರಿಲಾಲನ ನಿವೇದನೆಯ ಬಗ್ಗೆ ಎಲ್ಲಾ ಕಡೆಗಳಿಂದ ಇನ್ನೂ ಹೆಚ್ಚು ಮಾಹಿತಿಗಳನ್ನು ಕಲೆ ಹಾಕಿದರು. ಬಾಪೂ ಮತ್ತು ಹರಿಲಾಲನ ನಡುವಿನ ಸಂಘರ್ಷಕ್ಕೆ ಕಾರಣವೇನೆಂದು ತಿಳಿಯಲು ಚತುರರಾದ ಜಕಾರಿಯಾ ಅವರಿಗೆ ತಡವಾಗಲಿಲ್ಲ. ಬಾಪೂ ಅವರ ಈ ಪುತ್ರ ಒಮ್ಮೆ ತಮ್ಮ ಹಿಡಿತಕ್ಕೆ ಬಂದರೆ, ದೇಶದ ಹಿಂದೂಗಳ ಮೇಲೆ ಬಲವಾದ ಪ್ರಹಾರ ಮಾಡಿ, ಅವರಿಗೆ ವಾಸಿಯಾಗದ ಹೊಡೆತವನ್ನು ಕೊಡಬಹುದು ಎಂಬ ವಿಶ್ವಾಸ ಅವರಿಗಿತ್ತು. ಹರಿಲಾಲ ಹಣ ಮತ್ತು ಹೆಣ್ಣಿಗೆ ತವಕಿಸುತ್ತಿರುವ ಸಂಗತಿ ಜಕಾರಿಯಾ ಅವರಿಗೆ ತಿಳಿದಿತ್ತು; ಈ ಎರಡನ್ನೂ ಅವನಿಗೆ ಒದಗಿಸುವುದು ಕಷ್ಟದ ಕೆಲಸವಾಗಿರಲಿಲ್ಲ; ಹೀಗೆ ಮಾಡಿ ತಾವು ಕೋಟ್ಯಂತರ ಮುಸಲ್ಮಾನರಲ್ಲಿ ಉತ್ಸಾಹವನ್ನು ಬಿತ್ತಬಹುದು. ಅಲ್ಲದೆ ತಾವು ಊಹಿಸಲಾಗದ ಕೆಲಸವನ್ನು ಮಾಡಿ ಕೋಟ್ಯಂತರ ಮುಸಲ್ಮಾನರ ದೃಷ್ಟಿಯಲ್ಲಿ ತಾವೂ ಸಹ ಜಿನ್ನಾ ಸಾಹೇಬರಂತೆ ಉನ್ನತ ಸ್ಥಾನಕ್ಕೇರಬಹುದು ಎಂದೂ ಜಕಾರಿಯಾ ಅವರು ಯೋಚಿಸುತ್ತಿದ್ದರು; ಹೀಗೆ ಯೋಚಿಸಿ ಅವರು ಜೊಲ್ಲು ಸುರಿಸುತ್ತಿದ್ದರು. ಅವರು ಎಲ್ಲವನ್ನೂ ಲೆಕ್ಕಾಚಾರ ಮಾಡಿ ನೋಡಿದರು.

ಜಕಾರಿಯಾ ತಕ್ಷಣ ಹರಿಲಾಲನನ್ನು ಸಂಪರ್ಕಿಸಿದರು. ಜಕಾರಿಯಾ ಸಾಹೇಬರ ಮಾತುಗಳು ಹರಿಲಾಲನಿಗೆ ಅನಪೇಕ್ಷಿತವಾಗಿದ್ದು, ಆಶ್ಚರ್ಯಕರವಾಗಿದ್ದವು. ಜಕಾರಿಯಾ ಅವರ ಹೆಸರು ಹರಿಲಾಲನಿಗೆ ಅಪರಿಚಿತವಾಗಿರಲಿಲ್ಲ. ಅವನು ಈಗ ದಾರಿದ್ರ್ಯದ ಸ್ಥಿತಿಯಲ್ಲಿ ದಿನಗಳನ್ನು ಕಳೆಯುತ್ತಿದ್ದ, ಆದರೆ ಅವನು ದೇಶದ ತತ್ಕಾಲೀನ ಸಮಾಜದಲ್ಲಿ ಯಾವ ಸ್ಥಾನದಲ್ಲಿದ್ದನೋ, ಅದರ ಬಗ್ಗೆ ಜಾಗರೂಕನಾಗಿದ್ದ.

ಅಂಥ ಪರಿಸ್ಥಿತಿಯಲ್ಲಿ ಸ್ವತಃ ಜಕಾರಿಯಾ ಸಾಹೇಬರು ಅವನ ಬಳಿಗೆ ಬಂದು, ಅವನನ್ನು ಸಂಪರ್ಕಿಸಿದ್ದನ್ನು ನೋಡಿ ಹರಿಲಾಲ ಮೊದಲ ನೋಟದಲ್ಲಿಯೇ ತುಂಬಾ ಸಂತಸವನ್ನು ಮನಗಂಡ. ಈ ಸಂತಸದ ನಡುವೆಯೇ ಮೊದಲಿನಿಂದ ಧಗಧಗಿಸುತ್ತಿದ್ದ ವೈಮನಸ್ಸು ಮತ್ತೂ ಪ್ರಜ್ವಲಿಸಿತು. ಜಕಾರಿಯಾ ಸಾಹೇಬರು ಕಟ್ಟಾ ಸಾಂಪ್ರದಾಯಿಕ ವ್ಯಕ್ತಿಗಳಾಗಿದ್ದು, ಬಾಪೂ ಮತ್ತು ಕಾಂಗ್ರೆಸ್‌ಗೆ ಪ್ರಬಲ ವಿರೋಧಿಗಳಾಗಿದ್ದರು. ಹರಿಲಾಲನಿಗೆ ಈ ವಾಸ್ತವಿಕತೆಯ ಅರಿವಿತ್ತು. ಜಕಾರಿಯಾ